# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03**

ಸಂಖ್ಯೆ ಬಿ1/ಐ.ಎಲ್.ಡಿ.ಟಿ.21/2019-20 ದಿನಾಂಕ:30.09.2020

## ಜ್ಞಾಪನ

ವಿಷಯ:- ಜೂನ್/ಜುಲೈ-2020ರ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಶೈಕ್ಷಣಿಕ ಜಿಲ್ಲಾವಾರು ಗರಿಷ್ಠ ಅಂಕ ಪಡೆದ ತಲಾ 03 ವಿದ್ಯಾರ್ಥಿಗಳಿಗೆ ಮತ್ತು ಶೈಕ್ಷಣಿಕ ಬ್ಲಾಕ್‌ವಾರು ಗರಿಷ್ಠ ಅಂಕ ಪಡೆದ ತಲಾ 03 ವಿದ್ಯಾರ್ಥಿಗಳಿಗೆ(ಜಿಲ್ಲಾವಾರು ಆಯ್ಕೆಯಾದ ವಿದ್ಯಾರ್ಥಿಗಳನ್ನು ಹೊರತುಪಡಿಸಿ) ಪ್ರೋತ್ಸಾಹದಾಯಕವಾಗಿ ಲ್ಯಾಪ್‌ಟಾಪ್‌ಗಳನ್ನು ಸಂಬಂಧಿಸಿದ ಅರ್ಹ ವಿದ್ಯಾರ್ಥಿಗಳಿಗೆ ವಿತರಿಸುವ ಕುರಿತು

ಉಲ್ಲೇಖ:- 1)ಮಂಡಳಿಯ ಪತ್ರ ಸಂಖ್ಯೆ: ಬಿ1/ಐ.ಎಲ್.ಡಿ.ಟಿ.21/2019-20 ದಿ:25-09-2020.
2)ಮಂಡಳಿಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ರಾಜ್ಯ 34 ಶೈಕ್ಷಣಿಕ ಜಿಲ್ಲೆಗಳ ಅರ್ಹ ವಿದ್ಯಾರ್ಥಿಗಳ ಪಟ್ಟಿ.

* * *

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಜೂನ್/ಜುಲೈ-2020ರ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡಿರುವ, ಶೈಕ್ಷಣಿಕ ಜಿಲ್ಲಾವಾರು ಗರಿಷ್ಠ ಅಂಕ ಪಡೆದ ತಲಾ 03 ವಿದ್ಯಾರ್ಥಿಗಳಿಗೆ ಮತ್ತು ಶೈಕ್ಷಣಿಕ ಬ್ಲಾಕ್‌ವಾರು ಗರಿಷ್ಠ ಅಂಕ ಪಡೆದ ತಲಾ 03 ವಿದ್ಯಾರ್ಥಿಗಳಿಗೆ(ಜಿಲ್ಲಾವಾರು ಆಯ್ಕೆಯಾದ ವಿದ್ಯಾರ್ಥಿಗಳನ್ನು ಹೊರತುಪಡಿಸಿ) ಪ್ರೋತ್ಸಾಹದಾಯಕವಾಗಿ ಲ್ಯಾಪ್‌ಟಾಪ್ ವಿತರಿಸುವ ಸಂಬಂಧ ಅಗತ್ಯವಿರುವ ಲ್ಯಾಪ್‌ಟಾಪ್‌ಗಳನ್ನು ಮಂಡಳಿಯು ಈಗಾಗಲೇ ಖರೀದಿಸಿ ರಾಜ್ಯದ ಎಲ್ಲಾ 34 ಶೈಕ್ಷಣಿಕ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ) ಕಚೇರಿಗಳಿಗೆ ಉಲ್ಲೇಖ(1)ರ ಜ್ಞಾಪನದೊಂದಿಗೆ ಲಗತ್ತಿಸಿ ಸರಬರಾಜು ಸಂಸ್ಥೆ ಮೂಲಕ ನೇರವಾಗಿ ರವಾನಿಸಲಾಗಿದೆ.

ಪ್ರಸ್ತುತ ಜೂನ್/ಜುಲೈ-2020ರ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯ ಅರ್ಹ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ವಿತರಿಸುವ ಮುನ್ನ ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಮುಖ್ಯ ಶಿಕ್ಷಕರು ಕೆಳಕಂಡ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

1. ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ಸದರೀ ಜ್ಞಾಪನ ದೊಂದಿಗೆ ಲಗತ್ತಿಸಿದೆ ಹಾಗೂ ಮಂಡಳಿಯ ಅಧಿಕೃತ ವೆಬ್‌ಸೈಟ್ www.kseeb.kar.nic.in ನಲ್ಲಿಯೂ ಸಹ ಪ್ರಕಟಿಸಲಾಗಿದೆ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ರವರು ದಿನಾಂಕ: 08.10.2020ರೊಳಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಭೆ ಕರೆದು, ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ಪರಿಶೀಲನೆಗೆ ಹಸ್ತಾಂತರಿಸುವುದು.
3. ಅರ್ಹ ವಿದ್ಯಾರ್ಥಿಗಳ ಪಟ್ಟಿ ಪಡೆದ ನಂತರ ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ದಿನಾಂಕ:12.10.2020ರೊಳಗೆ ಸಂಬಂಧಪಟ್ಟ ವಲಯದ ಎಲ್ಲಾ ಸರ್ಕಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕರ ಸಭೆಯನ್ನು ಕಡ್ಡಾಯವಾಗಿ ಕರೆದು, ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ಪರಿಶೀಲನೆಗೆ ನೀಡತಕ್ಕದ್ದು.
4. ಪರಿಶೀಲನೆಯ ಸಂದರ್ಭದಲ್ಲಿ ಉಪನಿರ್ದೇಶಕರು(ಆಡಳಿತ), ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಮುಖ್ಯ ಶಿಕ್ಷಕರು ಅರ್ಹ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಇರುವ ಬಗೆಗೆ ಹಾಗೂ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳನ್ನು ಹೊರತು ಪಡಿಸಿ ಬೇರೆ ಖಾಸಗಿ/ಅನುದಾನಿತ ಶಾಲೆಯ ವಿದ್ಯಾರ್ಥಿಗಳು ಅಥವಾ ಸರ್ಕಾರಿ ಶಾಲೆಗೆ 'ಟ್ಯಾಗ್ ಆನ್' ಆದ ಖಾಸಗಿ ಶಾಲೆಯ ವಿದ್ಯಾರ್ಥಿಗಳು ಇರದಿರುವ ಬಗೆಗೆ ಖಚಿತ ಪಡಿಸಿಕೊಳ್ಳತಕ್ಕದ್ದು ಹಾಗೂ ಪಟ್ಟಿಯಲ್ಲಿ ತಮ್ಮ ಶಾಲೆಗಳ ಅರ್ಹ ವಿದ್ಯಾರ್ಥಿ ಬಿಟ್ಟು ಹೋಗಿದ್ದಲ್ಲಿ ಕೂಡಲೇ, ಲ್ಯಾಪ್‌ಟಾಪ್ ವಿತರಿಸದೆ, ಉಪನಿರ್ದೇಶಕರು (ಆಡಳಿತ) ರವರ ಮೂಲಕ ಮಂಡಳಿಯನ್ನು ಸಂಪರ್ಕಿಸಿ, ಪರಿಷ್ಕೃತ ಪಟ್ಟಿ ಮತ್ತು ಆದೇಶ ಪಡೆಯತಕ್ಕದ್ದು.
5. ಮೇಲ್ಕಂಡ ಎಲ್ಲಾ ಪ್ರಕ್ರಿಯೆಗಳನ್ನು ದಿನಾಂಕ:15.10.2020ರೊಳಗೆ ಮುಕ್ತಾಯಗೊಳಿಸಿ ಅರ್ಹ ಫಲಾನುಭವಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ವಿತರಿಸುವುದು.
6. ಲ್ಯಾಪ್‌ಟಾಪ್ ವಿತರಣೆಯ ನಂತರ, ಅರ್ಹ ವಿದ್ಯಾರ್ಥಿಗಳು ಪಟ್ಟಿಯಲ್ಲಿ ಬಿಟ್ಟು ಹೋಗಿರುವ ಬಗೆಗೆ ಪ್ರಸ್ತಾವನೆ ಸಲ್ಲಿಸಲು ಅವಕಾಶವಿರುವುದಿಲ್ಲ, ಇಂತಹ ಪ್ರಕರಣಗಳು ಉದ್ಭವಿಸಿದ ಪಕ್ಷದಲ್ಲಿ ಸಂಬಂಧಪಟ್ಟ ಉಪನಿರ್ದೇಶಕರು (ಆಡಳಿತ), ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಮುಖ್ಯ ಶಿಕ್ಷಕರುಗಳು ಜಂಟಿಯಾಗಿ ಜವಾಬ್ದಾರರಾಗಿದ್ದು, ಶಿಸ್ತು ಕ್ರಮ ಜರುಗಿಸಲಾಗುವುದು.

7. ಯಾವುದೇ ರೀತಿಯ ಗೊಂದಲಗಳಿದ್ದಲ್ಲಿ, ಲ್ಯಾಪ್‌ಟಾಪ್ ವಿತರಣೆ ಮುನ್ನವೇ ಮಂಡಳಿಯ ಹಿರಿಯ ಸಹಾಯಕ ನಿರ್ದೇಶಕರು, 'ಬಿ' ಶಾಖೆ, ರವರನ್ನು ಸಂಪರ್ಕಿಸಿ ಬಗೆಹರಿಸಿಕೊಳ್ಳತಕ್ಕದ್ದು.

8. ಅರ್ಹ ಫಲಾನುಭವಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ನೊಂದಿಗೆ ನೀಡಬೇಕಾಗಿರುವ "ಅಭಿನಂದನಾ ಪತ್ರ"ಗಳನ್ನು ಮತ್ತು ಲ್ಯಾಪ್‌ಟಾಪ್ ವಿತರಿಸಿರುವುದಕ್ಕೆ ಸ್ವೀಕೃತಿಯನ್ನು ಪಡೆಯುವ ಸಂಬಂಧ "ಲ್ಯಾಪ್‌ಟಾಪ್ ವಿತರಣೆ ಸ್ವೀಕೃತಿ"ಗಳನ್ನು ಮಂಡಳಿಯಿಂದ ಜಿಲ್ಲೆಗಳಿಗೆ ಸರಬರಾಜು ಮಾಡಲಾಗುವುದು. ಸದರಿ ಸ್ವೀಕೃತಿಯಲ್ಲಿ ವಿದ್ಯಾರ್ಥಿ ಸಹಿ ಮತ್ತು ಸಂಬಂಧಿಸಿದ ಶಾಲೆಯ ಮುಖ್ಯ ಶಿಕ್ಷಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರು(ಆಡಳಿತ)ರವರು ದೃಢೀಕರಿಸಿ ಸ್ವೀಕೃತಿಯನ್ನು ಮಂಡಳಿಗೆ ಕಡ್ಡಾಯವಾಗಿ ಸಲ್ಲಿಸುವುದು. ವಿದ್ಯಾರ್ಥಿಯು ಲ್ಯಾಪ್‌ಟಾಪ್ ಪಡೆಯುತ್ತಿರುವ ಭಾವಚಿತ್ರವನ್ನು ಸಹ ಪಡೆದುಕೊಳ್ಳತಕ್ಕದ್ದು.

9. ವಿದ್ಯಾರ್ಥಿಗಳು ಲ್ಯಾಪ್‌ಟಾಪ್ ಪಡೆದ ಸ್ವೀಕೃತಿಗಳು ಶಾಶ್ವತ ದಸ್ತಾವೇಜುಗಳಾಗಿದ್ದು, ರಾಜ್ಯ ಸರ್ಕಾರದ ಲೆಕ್ಕ ಪರಿಶೋಧನಾ ಇಲಾಖೆ ಮತ್ತು ಕೇಂದ್ರ ಸರ್ಕಾರದ ಮಹಾಲೇಖಪಾಲರಿಂದ ಲೆಕ್ಕಪರಿಶೋಧನೆಗೆ ಒಳಪಡಲಿದ್ದು, ಕಡ್ಡಾಯವಾಗಿ ಉಪನಿರ್ದೇಶಕರು(ಆಡಳಿತ) ಕಚೇರಿಗಳಲ್ಲೇ ಕ್ರೋಢೀಕರಿಸಿ ಮಂಡಳಿಗೆ ರವಾನಿಸುವುದು. ಸದರೀ ಸೂಚನೆಯ ಹೊರತಾಗಿಯೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗಳಿಂದ ನೇರವಾಗಿ ಮಂಡಳಿಗೆ ಸ್ವೀಕೃತಿಗಳು ರವಾನೆಯಾಗುತ್ತಿದ್ದು, ಈ ಬಗೆಗೆ ಸೂಕ್ತ ಸೂಚನೆಗಳನ್ನು ಉಪನಿರ್ದೇಶಕರು (ಆಡಳಿತ) ರವರು ನೀಡತಕ್ಕದ್ದು.

10. ಲ್ಯಾಪ್‌ಟಾಪ್ ವಿತರಣೆಯ 02 ತಿಂಗಳ ನಂತರ, ಲ್ಯಾಪ್‌ಟಾಪ್ ಪಡೆದ ಅರ್ಹ ವಿದ್ಯಾರ್ಥಿಗಳಿಂದ ಲ್ಯಾಪ್‌ಟಾಪ್‌ಗಳ ಕಾರ್ಯ ನಿರ್ವಹಣೆಯ ಬಗ್ಗೆ ಪ್ರತಿಕ್ರಿಯೆಗಳನ್ನು ಮುಖ್ಯ ಶಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರು(ಆಡಳಿತ) ರವರು ದಿನಾಂಕ:31-12-2020ರೊಳಗೆ ಪಡೆದು ಕಡ್ಡಾಯವಾಗಿ ಮಂಡಳಿಯ ವಿದ್ಯುನ್ಮಾನ ಅಂಚೆ b.sadpikseeb@gmail.com ವಿಳಾಸಕ್ಕೆ ರವಾನಿಸುವುದು ಹಾಗೂ ವಿದ್ಯಾರ್ಥಿಗಳೂ ಸಹ ತಮ್ಮ ಅಭಿಪ್ರಾಯಗಳನ್ನು ನೇರವಾಗಿ ಅಂಚೆ/ವಿದ್ಯುನ್ಮಾನ ಅಂಚೆ ಮೂಲಕ ಮಂಡಳಿಗೆ ನೀಡುವ ಅವಕಾಶವಿರುವ ಬಗ್ಗೆ ಮುಖ್ಯ ಶಿಕ್ಷಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವಂತೆ ಸೂಚಿಸುವುದು.

11. ಸದರೀ ಕಾರ್ಯದ ಅನುಷ್ಠಾನದ ವೇಳೆಯ ಸಂದರ್ಭದಲ್ಲಿ ಯಾವುದೇ ಗೊಂದಲ/ಸಂಶಯ/ಸಮಸ್ಯೆಗಳು ಉದ್ಭವವಾದಲ್ಲಿ ಕೂಡಲೇ ಪರೀಕ್ಷಾ ಮಂಡಳಿಯನ್ನು ಸಂಪರ್ಕಿಸಿ ಅಗತ್ಯ ಸೂಚನೆ ಪಡೆದು ಸಮಸ್ಯೆ ಪರಿಹರಿಸಿಕೊಳ್ಳತಕ್ಕದ್ದು.

ಘನ ರಾಜ್ಯ ಸರ್ಕಾರದ ಸದರೀ ಪ್ರತಿಷ್ಠಿತ ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ, ಮೇಲೆ ತಿಳಿಸಿರುವ ಎಲ್ಲಾ ಅಂಶಗಳನ್ನು ಚಾಚೂ ತಪ್ಪದೆ ಕ್ರಮವಹಿಸುವಂತೆ ಈ ಮೂಲಕ ಸ್ಪಷ್ಟವಾಗಿ ಸೂಚಿಸಿದೆ.

ತಮ್ಮ ನಂಬುಗೆಯ,

(ವಿ.ಸುಮಂಗಲ) 6/10

ನಿರ್ದೇಶಕರು, ಪರೀಕ್ಷೆಗಳು

ಪ್ರತಿ,

1. ರಾಜ್ಯದ ಎಲ್ಲಾ 34 ಶೈಕ್ಷಣಿಕ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ) ರವರುಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ,
2. ರಾಜ್ಯದ ಎಲ್ಲಾ 204 ಕ್ಷೇತ್ರ ಶಿಕ್ಷಣಾಧಿಕರಿಗಳಿಗೆ, ಸಂಬಂಧಪಟ್ಟ ಉಪನಿರ್ದೇಶಕರು(ಆಡಳಿತ) ರವರ ಮೂಲಕ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕರುಗಳಿಗೆ, ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಮುಂದಿನ ಸೂಕ್ತ ಕ್ರಮಕ್ಕಾಗಿ.
4. ಶಾಖಾಧಿಕಾರಿಗಳು, 'ಬಿ' ಶಾಖೆ, ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಗಣಕ ಶಾಖೆಗೆ ನೀಡುವುದು.
5. ಶಾಖಾಧಿಕಾರಿಗಳು, ಗಣಕ ಶಾಖೆ, ರವರು, 'ಬಿ' ಶಾಖೆಯಿಂದ ಪಡೆದ ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ಮಂಡಳಿಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
6. ಕಚೇರಿ ಪ್ರತಿ.